ವರ್ಗಾವಣೆಯಾಗಿಲ್ಲ. ಇದರ ವಿವರಗಳನ್ನು ಸದನದ ಮೂಲಕ ಸಚಿವರಿಗೆ ಕಳುಹಿಸುತ್ತಿದ್ದೇನೆ. ಇದರ ಬಗ್ಗೆ ಮುಂದೆ ಕೈಗೊಳ್ಳುವ ಕ್ರಮವೇನು ಎನ್ನುವುದನ್ನು ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಇಂಥ ಅನೇಕ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಮಾನ್ಯ ಸದಸ್ಯರು ಹೇಳಿದಂತೆ ಬಹಳ ನಿಧಾನವಾಗುತ್ತಿದೆ. ಈ ಬಗ್ಗೆ ಸರ್ಕಾರ ವ್ಯಾಪಕವಾದಂಥ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಕ್ಕೆ ಈಗಾಗಲೇ ಸಿದ್ಧತೆಯನ್ನು ಮಾಡುತ್ತಿದೆ. 2000-2001ನೇ ವರ್ಷವನ್ನು ಮೂಲ ದಾಖಲೆಗಳ ವರ್ಷ ಎಂದು ತೀರ್ಮಾನ ಮಾಡಿ ಆರ್.ಟಿ.ಸಿ. ದಾಖಲೆಗಳನ್ನು ಇಂದೀಕರಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಲಾಗಿದೆ. ಆದಷ್ಟು ಜಾಗ್ರತೆ ಎಲ್ಲ ಆರ್.ಟಿ.ಸಿ.ಗಳನ್ನು ಕ್ರಮಬದ್ಧವಾಗಿ ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :— ಎರಡನೆಯ ಪ್ರಶ್ನೆಯ ಉತ್ತರದಲ್ಲಿ ಸರ್ಕಾರ ದಿನಾಂಕ: 26-5-2000ರಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಿದೆ ಎಂದು ತಿಳಿಸಿದ್ದಾರೆ. ಸುತ್ತೋಲೆ ಇದ್ದರೂ ಸಹ, ಪಟ್ಟೇದಾರರು ಮೃತಪಟ್ಟು 30-35 ವರ್ಷಗಳಾದರೂ ಇಲ್ಲಿಯವರೆಗೆ ಅವರ ಮಕ್ಕಳ ಹೆಸರಿಗೆ ಏಕೆ ವರ್ಗದವಣೆಗಳೇ, ಅಧಿಕಾರ ವರ್ಗದವಣೆಗಳೇ ವರ್ಗಾವಣೆ ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ. ಪಕ್ಕದ ರಾಜ್ಯದ ಆಂಧ್ರಪ್ರದೇಶದಲ್ಲಿ ಅಧಿಕಾರವರ್ಗದವರೇ ಪ್ರತಿ ಮೂರು ತಿಂಗಳಿಗೊಮ್ಮೆ ಗ್ರಾಮಗಳಿಗೆ ಹೋಗಿ ಆ ಗ್ರಾಮದಲ್ಲಿರುವ ಪಟ್ಟೇದಾರರು ಯಾರಾದರೂ ಮೃತಪಟ್ಟಿದ್ದರೆ, ಅವರ ಹೆಸರಿನಲ್ಲಿ ಇರುವುದನ್ನು ವರ್ಗಾವಣೆ ಮಾಡುವಂಥ ವ್ಯವಸ್ಥೆ ಮಾಡುತ್ತಿದ್ದಾರೆ. ಇದೇ ಪ್ರಕಾರ ನಮ್ಮಲ್ಲೂ ಆಗಬಹುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಸರ್ಕಾರ ಆರ್.ಟಿ.ಸಿ. ದಾಖಲೆಗಳನ್ನು ಅವರವರ ಮನೆ ಬಾಗಿಲಿಗೇ ಒದಗಿಸುವ ವ್ಯವಸ್ಥೆ ಮಾಡುವ ಪ್ರಯತ್ನ ಮಾಡುತ್ತಿದೆ. ಖಂಡಿತವಾಗಿಯೂ ನಾವು ಅದನ್ನು ಮಾಡುತ್ತೇವೆ.

ಚಾಮರಾಜನಗರದಲ್ಲಿ ಹಾಪ್‌ಕಾಮ್ಸ್ ಮಳಿಗೆ.

490(4612) ಶ್ರೀ ಬಿ.ಎನ್.ನುಜುಂಡಸ್ವಾಮಿ (ಕೊಳ್ಳೇಗಾಲ) :— ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಚಾಮರಾಜನಗರ ಜಿಲ್ಲೆಯಲ್ಲಿ ಹಾಪ್‌ಕಾಮ್ಸ್ ಅಂಗಡಿ ಮಳಿಗೆಯನ್ನು ಇದುವರೆಗೆ ತೆರೆಯದೇ ಇರಲು ಕಾರಣವೇನು?

2 ಇದರ ಅವಶ್ಯಕತೆ ಇರುವುದರಿಂದ ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :—

1. ಚಾಮರಾಜನಗರ ಜಿಲ್ಲೆಯಲ್ಲಿ ಮಾರಾಟ ಮಳಿಗೆಗಳನ್ನು ಈ ಕೆಳಕಂಡ ಕಾರಣಗಳಿಂದಾಗಿ ತೆರೆದಿರುವುದಿಲ್ಲ.

ಅ) ಹಾಪ್‌ಕಾಮ್ಸ್ ಕಾರ್ಯ ವ್ಯಾಪ್ತಿಯನ್ನು ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗೆ ಸೀಮಿತಗೊಳಿಸಿರುವುದು.

ಆ) ಹಾಪ್‌ಕಾಮ್ಸ್‌ನ ಆಸ್ತಿ ಮತ್ತು ದಾಯಿತ್ವಗಳನ್ನು ಜಿಲ್ಲಾ ಮಟ್ಟದ ಸಹಕಾರ ಸಂಘಗಳಿಗೆ ವಹಿಸಿಕೊಡುವ ವಿಷಯವು ಪರಿಶೀಲನೆಯಲ್ಲಿದೆ.

ಇ) ಮಾರಾಟ ಮಳಿಗೆ ತೆರೆಯಲು ಕಾರ್ಯ ಸಾಧ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

2. ಹೌದು

ಶ್ರೀ ಜೆ.ಎನ್. ನಂಜುಂಡಸ್ವಾಮಿ :— ಮಾನ್ಯ ಅಧ್ಯಕ್ಷರೇ, ನೀಡಿರುವ ಉತ್ತರ ಸಮರ್ಪಕವಾಗಿಲ್ಲ ಎಂದು ನಾನು ಭಾವಿಸಿದ್ದೇವೆ. ಈಗಾಗಲೇ ಮೈಸೂರು ಜಿಲ್ಲೆಯಲ್ಲಿ ಅನೇಕ ಕಡೆಗಳಲ್ಲಿ ಹಾಪ್‌ಕಾಮ್ಸ್ ಶಾಪ್‌ಗಳನ್ನು ತೆಗೆದಿದ್ದೀರಿ. ಮೈಸೂರಿನಿಂದ ಚಾಮರಾಜನಗರಕ್ಕೆ ಬರತಕ್ಕಂಥ ಮಾರ್ಗದಲ್ಲಿ ನಂಜನಗೂಡು, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಇಲ್ಲಿಂದ ರೊಟೇಷನ್ ಪದ್ಧತಿಯನ್ನು ತೆಗೆದುಕೊಂಡು ಟಿ.ನರಸೀಪುರದ ಮಾರ್ಗವಾಗಿ ಮತ್ತೆ ಮೈಸೂರಿಗೆ ಹೋಗುವಂಥ ವ್ಯವಸ್ಥೆ ಇದೆ. ಆದಷ್ಟು ಬೇಗ ಸಚಿವರು ನಿರ್ಣಯವನ್ನು ತೆಗೆದುಕೊಂಡು, ಆ ಭಾಗದ ರೈತಾಪಿ ಮತ್ತು ಕೆಳಮಟ್ಟದ ಜನತೆಗೆ ಅವಕಾಶವನ್ನು ಕಲ್ಪಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :— ಚಾಮರಾಜನಗರ ಜಿಲ್ಲೆ ಹೊಸದಾಗಿ ಆಗಿರತಕ್ಕಂಥಾದ್ದು ಎಂದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಆ ಜಿಲ್ಲೆಯಲ್ಲಿ ಈಗಾಗಲೇ 900 ಜನ ಸದಸ್ಯರಿರುವ ಜಿಲ್ಲಾ ತೋಟದ ಬೆಳೆಗಾರರ ಸಹಕಾರ ಸಂಘ ನೋಂದಣಿಯಾಗಿದ್ದು, ಆದು ಅಸ್ತಿತ್ವಕ್ಕೆ ಬಂದಿದೆ. ಆ ಸಂಸ್ಥೆ ಈ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಕೆ.ಹೆಚ್.ಎಫ್. ಆದಮೇಲೆ ನಾವು ಎಲ್ಲವನ್ನೂ ಇಲ್ಲಿಂದಲೇ ಮಾನಿಟರ್ ಮಾಡುವುದಾದರೂ ಕೂಡ ಹೊಸ ಮಾರಾಟ ಕೇಂದ್ರಗಳನ್ನು ತೆಗೆಯತಕ್ಕಂಥ ಜವಾಬ್ದಾರಿಯನ್ನು ಜಿಲ್ಲಾ ತೋಟಗಾರಿಕೆ ಸಹಕಾರ ಸಂಘಕ್ಕೆ ಕೊಟ್ಟಿದ್ದೇವೆ. ಆ ಸಂಘ ಚುರುಕಾಗಿ ಕೆಲಸ ಮಾಡಿದಾಗ ಇದನ್ನು ಮಾಡಲು ಸಾಧ್ಯವಾಗುತ್ತದೆ. ಚಾಮರಾಜನಗರದಲ್ಲಿ ನಾಲ್ಕು ಮಳಿಗೆಗಳನ್ನು ಚಾಮರಾಜೇಶ್ವರೀ ದೇವಸ್ಥಾನದ ಹತ್ತಿರ, ರಾಮಸಮುದ್ರ ರಸ್ತೆಯಲ್ಲಿ, ಪಾಸಿಗಿ ಬಸ್ ನಿಲ್ದಾಣದಲ್ಲಿ ಮತ್ತು ಸರ್ಕಾರೀ ಆಸ್ಪತ್ರೆಯ ಆವರಣದಲ್ಲಿ ತೆಗೆಯಬೇಕು ಎನ್ನುವ ಉದ್ದೇಶವಿದೆ. ಇದಕ್ಕೆ ಹೆಚ್ಚು ಜಾಲನೆ ಸಿಗಬೇಕು ಎನ್ನುವುದಾದರೆ, ನಿಮ್ಮ ಜಿಲ್ಲಾ ಮಟ್ಟದ ಸಂಸ್ಥೆ ಎಷ್ಟು ಬೇಗ ಕೆಲಸ ಮಾಡುತ್ತದೋ, ಅಷ್ಟು ಬೇಗ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ, ದಯವಿಟ್ಟು ಆದರ ಬಗ್ಗೆ ತಮ್ಮ ಗಮನ ಇದ್ದರೆ ಒಳ್ಳೆಯದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:— ಮಾನ್ಯ ಅಧ್ಯಕ್ಷರೇ, ಹಾಪ್‌ಕಾಮ್ಸ್ ಕೇವಲ ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರದಲ್ಲಿ ಮಾತ್ರ ಇದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಮೈಸೂರು ನಗರದಲ್ಲಿ, ಮಂಡ್ಯಾದಲ್ಲಿ ಕೂಡ ಹಾಪ್‌ಕಾಮ್ಸ್‌ನ ಮಳಿಗೆಗಳು ಇವೆಯೆಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಏಕೆ ಪ್ರಸ್ತಾಪ ಮಾಡಲಿಲ್ಲವೋ ಗೊತ್ತಾಗಲಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ- ತೋಟದ ಬೆಳೆಗಾರರ ಸಹಕಾರ ಸಂಘಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಾರಂಭ ಮಾಡಿದೆ, ಅದರಲ್ಲೂ ಚಾಮರಾಜನಗರದಲ್ಲಿ 900 ಜನ ಸದಸ್ಯರು ಇದ್ದಾರೆ ಎಂದು ಉತ್ತರದಲ್ಲಿ ಹೇಳಿದರು. ಅದು ಮೊದಲು ಚಾಮರಾಜನಗರ ಮತ್ತು ಮೈಸೂರು ಒಂದೇ ಜಿಲ್ಲೆಯಾಗಿದ್ದಾಗ ಸ್ಥಾಪನೆಗೊಂಡಿರುವ, ಶೇರ್ ಕಲೆಕ್ಟ್ ಮಾಡಿರುವಂಥ ಒಂದು ಸಂಘ ಆಗಿದೆ. ಮೈಸೂರು ಜಿಲ್ಲೆಯಿಂದ ಚಾಮರಾಜನಗರ ಬೇರ್ಪಡೆಯಾಗಿ ಪ್ರತ್ಯೇಕವಾಗಿ ಹೊಸ-ಜಿಲ್ಲೆಯಾದ ಮೇಲೆ ಅಲ್ಲಿ ಜಿಲ್ಲಾಮಟ್ಟದ ತೋಟದ ಬೆಳೆಗಾರರ ಸಹಕಾರ ಸಂಘ ಪ್ರಾರಂಭವಾಗಿಲ್ಲ. ಆದ್ದರಿಂದ ತೋಟದ ಬೆಳೆ ಹೆಚ್ಚು ಬೆಳೆಯುವಂಥ ನಮ್ಮ ಜಿಲ್ಲೆಯಲ್ಲಿ, ಹಾಪ್‌ಕಾಮ್ಸ್ ಮಳಿಗೆಗಳನ್ನು ತ್ವರಿತವಾಗಿ ಪ್ರಾರಂಭಿಸಿ ತೋಟದ ಬೆಳೆ ಬೆಳೆಯುವಂಥವರಿಗೆ ಹೆಚ್ಚಿನ ಉತ್ತೇಜನವನ್ನು ಕೊಡಬೇಕು ಮತ್ತು ಇಲ್ಲಿ ಸರಿಯಾದ ಮಾರ್ಕೆಟಿಂಗ್ ವ್ಯವಸ್ಥೆ ಇಲ್ಲ. ಆದ್ದರಿಂದ ಇದಕ್ಕೆ ತೀವ್ರ ಗಮನವನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:— ಮಾನ್ಯ ಅಧ್ಯಕ್ಷರೆ, ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟಿಸವರು ಹಾಪ್‌ಕಾಮ್ಸ್ ಕಾರ್ಯವ್ಯಾಪ್ತಿ ಕುರಿತು ಈ ನಮ್ಮ ಕೆ.ಹೆಚ್.ಎಫ್. ಅಸ್ತಿತ್ವಕ್ಕೆ ಬಂದಮೇಲೆ ಈ ಮೂರು ಜಿಲ್ಲೆಗೆ ಸೀಮಿತವಾಗಿ ಮಾಡಿದ್ದಾರೆ. ಮೈಸೂರು ಚಾಮರಾಜನಗರ ಒಂದು ಆಗಿದ್ದಂಥ ಸಂದರ್ಭದಲ್ಲಿ ಕೂಡ ಚಾಮರಾಜನಗರದಲ್ಲಿ ಸಂಘ ಇತ್ತು. ಆಗ ಅದರಲ್ಲಿ ಸುಮಾರು 346 ಜನ ಸದಸ್ಯರಾಗಿದ್ದರು. ಆದರೆ ಚಾಮರಾಜನಗರಕ್ಕೆ ಹೊಸದಾಗಿ ಸಹಕಾರಿ ಸಂಘ ಮಾಡಬೇಕೆಂದು ಅದು ಅಸ್ತಿತ್ವಕ್ಕೆ ಬಂದು ಅಲ್ಲಿ ಸುಮಾರು 900 ಜನ ಸದಸ್ಯರಾಗಿದ್ದಾರೆ. ಈ ಕೆಹೆಚ್‌ಎಫ್‌ಗೆ ಒಂದು ಡಿಸ್ಟ್ರಿಕ್ಟ್‌ನಿಂದ ಬರತಕ್ಕಂಥ ಸಂಘಗಳು ಕೂಡ ಸದಸ್ಯತ್ವ ಹೊಂದಿರುತ್ತವೆ. ಇನ್ನು ಡಿಸ್ಟ್ರಿಕ್ಟ್‌ನ ಸಂಘದ ಮುಖಾಂತರವೇ ಇವತ್ತು ಕಾರ್ಯಚಟುವಟಿಕೆಯನ್ನು ಮಾಡಬೇಕಾಗಿರುತ್ತದೆ. ಈಗ ಮೈಸೂರಿಗೆ ಸೆಪರೇಟ್ ಆಗಿ ಇದೆ. ಈಗ ಚಾಮರಾಜನಗರಕ್ಕೆ ಹೊಸದಾಗಿ ಆಗುತ್ತಿದೆ. ಅದಕ್ಕೆ ನಮ್ಮ ಹಾಪ್‌ಕಾಮ್ಸ್ ವ್ಯಾಪ್ತಿಯಲ್ಲಿ ಇದ್ದಂಥ ಎಲ್ಲಾ ಆಸ್ತಿಯನ್ನು ಕೂಡ ಡಿಸ್ಟ್ರಿಕ್ಟ್ ಸೊಸೈಟಿಗಳಿಗೆ ವರ್ಗಾವಣೆ ಮಾಡಬೇಕಿನ್ನತಕ್ಕಂಥದ್ದು ಕೂಡ ಇದೆ. ಆದರೆ ನಮ್ಮ ಅವರ ಮಧ್ಯದಲ್ಲಿ ಕೆಲವು ಅಸೆಟ್ಸ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ, ಎಂಪ್ಲಾಯೀಸ್‌ನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಹೊಂದಾಣಿಕೆ ಆಗಿಲ್ಲದೇ ಇರುವುದರಿಂದ ಇವತ್ತು ಅಸೆಟ್ಸ್ ವರ್ಗಾವಣೆ ಆಗಿಲ್ಲ. ಎಲ್ಲದಕ್ಕೂ ಕೂಡ ಜಿಲ್ಲಾ ಮಟ್ಟದಲ್ಲಿರತಕ್ಕಂಥ ಸಂಸ್ಥೆಗಳೇ ಜವಾಬ್ದಾರಿಕೆಯನ್ನು ಹೊರಬೇಕಾಗುತ್ತದೆ. ಚಾಮರಾಜನಗರದಲ್ಲಿ ಹೊಸದಾಗಿ ರಚನೆಯಾಗಿದೆ. ಅದಕ್ಕೆ ನಾವು ಎಲ್ಲಾ ರೀತಿಯ ಚಾಲನೆಯನ್ನು ಕೊಡುತ್ತೇವೆ. ಆದರೆ ಮೂಮ್ಮಿತವಾಗಿ ಜವಾಬ್ದಾರಿಕೆಯನ್ನು ಹೊತ್ತು ಜಿಲ್ಲಾಮಟ್ಟದಲ್ಲಿ, ಸಂಸ್ಥೆಗಳು ಕೆಲಸ ಮಾಡಬೇಕಾಗುತ್ತದೆ

ಮಾಡಬೇಕು ಎನ್ನುವುದು ನನ್ನ ಸಲಹೆಯಾಗಿದೆ. ಮಾನ್ಯ ಸದಸ್ಯರು ಹೇಳಿರುವ ಹಾಗೆ ಸರ್ಕಾರದಿಂದ ಹಾಪ್‌ಕಾಮ್ಸ್ ಮಳಿಗೆಗಳನ್ನು ಪ್ರಾರಂಭ ಮಾಡಬೇಕು, ಅದಕ್ಕೆ ನಾವು ಬದ್ಧರಾಗಿದ್ದೇವೆ, ಆದರ ಬಗ್ಗೆ ನಾವು ಹಿಂದುಮುಂದು ನೋಡುವುದಿಲ್ಲ. ಆದರೆ ಜಿಲ್ಲಾಮಟ್ಟದಲ್ಲಿ ಬಾಲನೆ ಹೆಚ್ಚು ಚುರುಕಾಗಿರಬೇಕಾಗುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ :— ಮಾನ್ಯ ಅಧ್ಯಕ್ಷರೆ, ತೋಟಗಾರರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಸಲುವಾಗಿ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್, ಹಾಪ್‌ಕಾಮ್ಸ್ ಮತ್ತು ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಸೊಸೈಟಿ ಹೀಗೆ ಮೂರು ಬೇರೆ ಬೇರೆ ಸಂಸ್ಥೆಗಳಿದ್ದು ಇವುಗಳ ಮಧ್ಯೆ ಸರಿಯಾದ ಸಾಮರಸ್ಯ ಇರುವುದಿಲ್ಲ. ಹಾಪ್‌ಕಾಮ್ಸ್‌ಗೆ ಇರತಕ್ಕಂಥ ಮೂಲಭೂತ ಸೌಕರ್ಯ ಉಳಿದ ಎರಡು ಸಂಸ್ಥೆಗಳಿಗೆ ಇಲ್ಲದಿರುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಈ ಮೂರು ಸಂಸ್ಥೆಗಳನ್ನು ಒಂದೇ ಸಂಸ್ಥೆಯಡಿ ತರುವುದಕ್ಕೆ ಸರ್ಕಾರ ಕಾರ್ಯಪ್ರವೃತ್ತಿಯಾಗುತ್ತದೆಯೇ? ಪ್ರಸ್ತುತ ಇರತಕ್ಕಂಥ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್‌ನಿಂದ ರೈತರಿಗೆ ಏನಾದರೂ ಅನುಕೂಲವಾಗುತ್ತಿದೆಯೇ? ಸೌಲಭ್ಯ ಸಿಗುತ್ತಿದೆಯೇ? ಎನ್ನುವುದರ ಬಗ್ಗೆ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಹಾಪ್‌ಕಾಮ್ಸ್ ಎನ್ನತಕ್ಕಂಥದ್ದು ಡಿಸ್ಟ್ರಿಕ್ಟ್ ಹಾರ್ಟಿಕಲ್ಚರ್ ಸೆಂಟರ್ಸ್, ಸೊಸೈಟೀಸ್‌ಗೆ ಅವು ನೇರವಾಗಿ ಆ ಕೆ.ಹೆಚ್.ಎಫ್‌ಗೆ ಲಿಂಕ್ ಆಗಿರುತ್ತವೆ. ಅದೇ ರೀತಿ ಬೆಂಗಳೂರು ಪಟ್ಟಣ, ಗ್ರಾಮಾಂತರ ಮತ್ತು ಕೋಲಾರ ಸೇರಿಕೊಂಡು ಒಂದೇ ಹಾಪ್‌ಕಾಮ್ಸ್ ಇರತಕ್ಕಂಥದ್ದು. ಅದು ಬೇರೆ ಸೊಸೈಟಿ ರೀತಿಯಲ್ಲಿ ಇರತಕ್ಕಂಥದ್ದು ಅಷ್ಟೆ. ಆದರೆ ಹಾಪ್‌ಕಾಮ್ಸ್ ಎನ್ನತಕ್ಕಂಥ ಫೈಡರ್ ಮೀನಿಂಗ್ ಇರುವುದರಿಂದ ಎಲ್ಲದರಲ್ಲೂ ಸಾಮರಸ್ಯ ಇಲ್ಲ ಎನ್ನತಕ್ಕಂಥ ಭಾವನೆ ಇದೆ. ಅಸ್ತಿ ವರ್ಗಾವಣೆ ಆಗಿಲ್ಲದೇ ಇದ್ದರೂ ಕೂಡ ಮಹಿಮಾಟನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ಮಾಡುತ್ತಿದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಕೆ.ಹೆಚ್.ಎಫ್. ಹೆಚ್ಚು ಪ್ರಚಾರಕ್ಕೆ ಬರಬೇಕು, ಅದಕ್ಕೆ ಹೆಚ್ಚು ಜವಾಬ್ದಾರಿಕೆಯನ್ನು ಹೊರಿಸಬೇಕು ಎನ್ನತಕ್ಕಂಥದ್ದನ್ನು ಸರ್ಕಾರ ವಿಂಡಿತವಾಗಿ ಗಮನದಲ್ಲಿಟ್ಟುಕೊಂಡು ಆ ದಿಶೆಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ.ಎನ್. ನಂಜುಂಡಸ್ವಾಮಿ :— ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಜಿಲ್ಲೆಯಲ್ಲಿ ಮಾತ್ರ 3-4 ಅಂಗಡಿಗಳನ್ನು ತೆರೆಯುವಂಥ ಯೋಚನೆ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ದಯವಿಟ್ಟು ಚಾಮರಾಜನಗರ ಜಿಲ್ಲಾ ವ್ಯಾಪ್ತಿಗೆ ಬರತಕ್ಕಂಥ 5 ತಾಲ್ಲೂಕುಗಳು ಅಂದರೆ ಗುಂಡ್ಲುಪೇಟೆ, ಸಂತೆಮಾರನಹಳ್ಳಿ, ಯಳಂದೂರು, ಕೊಳ್ಳೇಗಾಲ ಈ ಭಾಗಗಳಲ್ಲಿ ಸಹ ಆದಷ್ಟು ಬೇಗ ಹಾಪ್‌ಕಾಮ್ಸ್‌ನ ಮಳಿಗೆಗಳನ್ನು ತೆರೆಯಬೇಕೆಂದು ಮಾನ್ಯ ಸಚಿವರಲ್ಲಿ, ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ವಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಸಂತೆಮಾರನಹಳ್ಳಿ, ಕೊಳ್ಳೆಗಾಲ, ಮಲೆಮಹದೇಶ್ವರ ಬೆಟ್ಟ, ಯಳಂದೂರು, ಬಿಳಿಗಿರಿರಂಗನಬೆಟ್ಟದಲ್ಲಿ ಕೂಡ ಹಾಪ್‌ಕಾಮ್ಸ್ ಮಳಿಗೆಗಳನ್ನು ತೆರೆಯಬೇಕೆನ್ನುವ ಉದ್ದೇಶ ಇದೆ. ಆದರೆ ಪ್ರಾಥಮಿಕ ಹಂತವಾಗಿ ನಾನು ಆಗಲೇ ಹೇಳಿದಂತೆ ಚಾಮರಾಜನಗರದ 4 ಸೆಂಟರ್‌ಗಳಲ್ಲಿ ತೆರೆಯುತ್ತೇವೆ ತದನಂತರ ಮಾನ್ಯ ಸದಸ್ಯರು ಹೇಳಿದ ಕಡೆಗಳಲ್ಲಿ ತೆರೆಯುವುದಕ್ಕೆ ಪ್ರಯತ್ನಿಸುತ್ತೇವೆ. ಚಾಮರಾಜನಗರದಲ್ಲಿ ತೋಟಗಾರಿಕೆ ಸಂಘ ಹೆಚ್ಚು ಚುರುಕಾಗಿ ಕೆಲಸ ಮಾಡಿದರೆ ಅಲ್ಲಿ ತೋಟದ ಬೆಳೆಗಾರರಿಗೆ ಸಾಕಷ್ಟು ಸಹಾಯವಾಗುತ್ತದೆ. ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ ಬಹುಶಃ ತಮ್ಮ ಜಿಲ್ಲೆಯಲ್ಲಿ ಬೆಳೆಯುವಂಥ ಬೆಳೆಗಳೆಲ್ಲವನ್ನು ಕೊಯಮತ್ತೂರಿನ ಭಾಗಕ್ಕೆ, ಅಚ್ಚಪಕ್ಕದ ತಮಿಳುನಾಡಿಗೆ ಹೋಗುತ್ತಿಂಥ ವಾತಾವರಣ ಅವಕಾಶ ಇದೆ. ನಿಮ್ಮ ಜಿಲ್ಲೆಯಲ್ಲಿ ಸಂಘವನ್ನು ಹೆಚ್ಚು ಚುರುಚುಗೊಳಿಸುವಂಥ ಕೆಲಸವನ್ನು ಮಾಡಿ. ತಾವು ಹೇಳಿದ ಹಾಗೆ ಎಲ್ಲಾ ಕಡೆಯಲ್ಲೂ ಹಾಪ್‌ಕಾಮ್ಸ್ ಸೆಂಟರುಗಳನ್ನು ಪ್ರಾರಂಭ ಮಾಡೋಣ.

ಆಶ್ರಯ ಯೋಜನೆಯಡಿ ಜಿಲ್ಲೆಗಳಿಗೆ ಹಂಚಿರುವ ನಿವೇಶನಗಳ ಕುರಿತು.

491(4529) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಆಶ್ರಯ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಗಳಿಗೆ ಹಂಚಿರುವ ನಿವೇಶನ ಸಂಖ್ಯೆ ಎಷ್ಟು ವಿವರ ನೀಡುವುದು;

ಆ) ಸರ್ಕಾರದಿಂದ ಹಕ್ಕು ಪತ್ರಗಳನ್ನು ಪಡೆದ ಫಲಾನುಭವಿಗಳಿಗೆ ಮನೆ ನಿವೇಶನಗಳು ಈವರೆಗೆ ದೊರೆಯದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :—

ಅ) ಅನುಬಂಧದಲ್ಲಿ ಲಗತ್ತಿಸಿದೆ.

ಆ) ಇಲ್ಲ.

ಇ) ಮೇಲಿನ ಪ್ರಶ್ನೆ (ಅ) ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.